ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಈ ವರ್ಷ ಆನೆ ಚಾವಳಿಯಿಂದ ಫಸಲು ನಷ್ಟವಾದ ಒಟ್ಟು ೧೫ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ. ಇದಕ್ಕಾಗಿ ಈವರೆಗೆ ಒಟ್ಟು ೫,೯೧೦ ರೂಪಾಯಿ ಗಳನ್ನು ಪರಿಹಾರ ಧನವನ್ನಾಗಿ ಕೊಡಲಾಗಿದೆ. ಇದೂ ಅಲ್ಲದೆ ಬಂದ ವರದಿಗಳನ್ನು ಪರಾಂಬರಿಸಿ ಬಾಕಿ ಇರುವ ಬೇಡಿಕೆಗಳಿಗೆ ಪರಿಹಾರ ಧನವನ್ನು ಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇದೂ ಅಲ್ಲದೆ ಕಾಡಾನೆಗಳ ಹಾವಳಿಗಳು ಇಲಾಖೆಯ ಗಮನಕ್ಕೆ ಬಂದ ಕೂಡಲೇ ಆನೆಗಳನ್ನು ಕಾಡಿಗೆ ಓಡಿಸಲು ಸಿಬ್ಬಂದಿಗಳನ್ನು ನೇಮಿಸಲಾಗಿದೆ.

ಕಾಡಾನೆ ಹಾವಳಿಯಿಂದ ಬೆಳೆ ನಷ್ಟ ಅಥವಾ ಜನರಿಗೆ ತೊಂದರೆ ಉಂಟಾದಾಗ ಕೂಡಲೇ ಪ್ರಕರಣ ಗಳ ಗಂಭೀರತೆಯ ಮೇಲೆ ಸೂಕ್ತ ಪರಿಹಾರವನ್ನು ನೀಡಲಾಗುತ್ತಿದೆ.

ಈ ಕಾಡಾನೆಗಳನ್ನು ಕಾಡಿನಲ್ಲಿಯೇ ಉಳಿಸುವ ಯೋಜನೆ ಒಂದನ್ನು ಇಟ್ಟುಕೊಂಡು ಕಾಡಿನ ಪ್ರದೇಶದ ಸುತ್ತಲೂ ವಿದ್ಯುತ್ಕಂತಿ ಬೇಲಿ ಹಾಕುವ ಯೋಜನೆಯೂ ಕೂಡ ಇದೆ.

ಧಾರವಾಡ ಜಿಲ್ಲೆಯಲ್ಲಿ 'ಡಚ್' ಯೋಜನೆಯಲ್ಲಿ ನೇಕಾರರಿಗೆ ವಸತಿ ಮನೆಗಳ ಕುರಿತಂ

೫೬೬. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ) ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯಲ್ಲಿ 'ಡಚ್' ಯೋಜನೆಯ ಎರಡನೇ ಹಂತದಲ್ಲಿ ನೇಕಾರರಿಗೆ ಎಷ್ಟು ವಸತಿ ಮನೆಗಳನ್ನು ನಿರ್ಮಿಸಲಾಗುವುದು (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ರೋಣ ತಾಲ್ಲೂಕಿನ ಗಜೇಂದ್ರಗಡ ನಗರದ ನೇಕಾರರಿಗೆ 'ಡಚ್' ನೆರವಿನ ಯೋಜನೆಯ ಎರಡನೇ ಹಂತದಲ್ಲಿ ವಸತಿ ಮನೆಗಳ ನಿರ್ಮಾಣವನ್ನು ಏಂದು ಪ್ರಾರಂಭಿಸಲಾಗುವುದು?

ಇ) ಮೇಲ್ಕಂಡ ಯೋಜನೆಯಲ್ಲಿ ನೇಕಾರ ಸಹಕಾರಿ ಸಂಘದ ಸದಸ್ಯರಿಗೆ ಎಷ್ಟು ಮನೆಗಳನ್ನು ಕೊಡಲಾಗುವುದು ?

ಈ) ಕೆ.ಹೆಚ್.ಡಿ.ಪಿ.ಯ ನೇಕಾರರಿಗೆ ಎಷ್ಟು ಮನೆಗಳನ್ನು ಕೊಡಲಾಗುವುದು?

ಶ್ರೀ ಜೆ.ಬಿಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) 'ಡಚ್' ಯೋಜನೆಯಲ್ಲಿ ಎರಡನೆಯ ಹಂತದ ಪ್ರಸ್ತಾಪ ಇನ್ನೂ ಪರಿಶೀಲನೆಯಲ್ಲಿ ಇದೆ.

ಆ) ಗಜೇಂದ್ರಗಡದಲ್ಲಿ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟುವ ಪ್ರಸ್ತಾಪ ಪರಿಶೀಲನೆ ಯಲ್ಲಿದೆ.

ಇ) ನೇಕಾರರ ಸಂಘದ ಸದಸ್ಯತ್ವವುಳ್ಳ ನೇಕಾರರು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಬರುವುದಿಲ್ಲ.

ಈ) ಇನ್ನೂ ಪರಿಶೀಲನೆಯಲ್ಲಿದೆ.

ಪಶುಚಿಕಿತ್ಸಾಲಯ ಅಥವಾ ಗ್ರಾಮೀಣ ಪಶುಚಿಕಿತ್ಸಾಲಯಗಳಲ್ಲಿ ಔಷಧ ಪೂರೈಕೆ ಸದ್ಯಕ್ಕೆ ಇರುವ ಪ್ರಮಾಣ ಹೆಚ್ಚಿಗೆ ಮಾಡುವ ಬಗ್ಗೆ.

೫೬೭. (ಪ್ರ) ಶ್ರೀ ಪಿ. ಸಿ. ಸಿದ್ದಣಗೌಡರ (ಲಕ್ಷ್ಮೇಶ್ವರ) ಮಾನ್ಯ ಕೃಷ್ಣಿ, ಪಶು ಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಪಶುಚಿಕಿತ್ಸಾಲಯಗಳಿಗೆ ಈಗಿನ ಪ್ರಮಾಣಕ್ಕಿಂತ ಹೆಚ್ಚಿಗೆ ಔಷಧ ಪೂರೈಸುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದ್ದಾರೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆ?